ಇ. ಧಾರವಾಡ ಕಲಾಭವನದಲ್ಲಿ ಹಿಂದಿನ ಮುಖ್ಯಮಂತ್ರಿಗಳು ವೆಂಕಟಪ್ಪ ಪ್ರಶಸ್ತಿ ನೀಡುವಾಗ್ಗೆ ಪ್ರಪ್ರಥಮ ಚಿತ್ರಕಲಾ ಶಾಲೆಗೆ ಅಗತ್ಯವಾದ ನಿವೇಶನವನ್ನು ಉಚಿತವಾಗಿ ನೀಡಲು ಆಶ್ವಾಸನೆ ನೀಡಿರುವುದು ಸರಿಯಷ್ಟೆ: ಹಾಗಾದರೆ ಈವರೆಗೆ ನಿವೇಶನ ನೀಡದಿರಲು ಕಾರಣವೇನು; ವಿಳಂಬ ನೀತಿಯೇಕೆ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯವರು)

ಅ. ಬಂದಿದೆ

ಆ. ಹೌದು

ಇ. ಚಿತ್ರಕಲಾ ಶಾಲೆಗೆ ನಿವೇಶನ ನೀಡುವ ಪ್ರಸ್ತಾಪ ಇಲಾಖೆ ಮುಂದಿರುವುದಿಲ್ಲ.

## ವಿಜಾಪುರ ಜಿಲ್ಲೆಯ ಡೋಣಿ ನದಿ ಹೂಳು

1864 (1778) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ವಿಜಾಪುರ ಜಿಲ್ಲೆಯ ಡೋಣಿ ನದಿಯ ಹೂಳೆತ್ತುವ ವಿಚಾರ ಸರ್ಕಾರಕ್ಕೆ ಇದೆಯೇ;

ಆ. ಈ ನದಿಯ ಹೂಳೆತ್ತುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆಯೆ;

ಇ. ಹೂಳೆತ್ತುವ ಯೋಜನೆಯು ಈಗ ಯಾವ ಹಂತದಲ್ಲಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ. ಇದೆ.

ಆ. ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ವಿಜಾಪುರ ಇವರಿಂದ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು. ಆದರೆ ಕೆಲವೊಂದು ಆಕ್ಷೇಪಣೆಯೊಂದಿಗೆ ತಿರುಗಿ ಬಂದಿರುವುದು. ಈ ಯೋಜನೆಯ ವರದಿಯನ್ನು ಆಕ್ಷೇಪಣೆಗಳನ್ನು ಸರಿಪಡಿಸಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ವಿಜಾಪುರ ಇವರ ಮುಖಾಂತರ ಮತ್ತೊಮ್ಮೆ ಕಳುಹಿಸಲಾಗುವುದು.

ಇ. ಯೋಜನೆಯ ಆಕ್ಷೇಪಣೆಗಳನ್ನು ಸರಿಪಡಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿಜಾಪುರ ಇವರ ಮುಖಾಂತರ ಕೇಂದ್ರ ಸರ್ಕಾರಕ್ಕೆ (ಪೈಲಟ್ ಪ್ರಾಜೆಕ್ಟ್) ಪ್ರಾಯೋಗಿಕ ವರದಿಯನ್ನು ಸಲ್ಲಿಸುವ ಹಂತದಲ್ಲಿದೆ.

## ಸಾರಿಗೆ ಇಲಾಖೆಯಿಂದ ರಾಜ್ಯದ ಬೊಕ್ಕಸಕ್ಕೆ ಬರುವ ಆದಾಯ

1866 (2003) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸಾರಿಗೆ ಇಲಾಖೆಯಿಂದ ರಾಜ್ಯದ ಬೊಕ್ಕಸಕ್ಕೆ ಬರುವ ಆದಾಯ ಎಷ್ಟು?

ಆ. ಕಳೆದ ಮೂರು ವರ್ಷಗಳಿಂದ ಎಷ್ಟು ಆದಾಯ ಬಂದಿದೆ; (ವರ್ಷವಾರು ಮಾಹಿತಿ ನೀಡಿ);

ಇ. ನಿರೀಕ್ಷಿತ ಆದಾಯ ಗಳಿಸದೇ ಇರಲು ಕಾರಣಗಳೇನು?

ಈ. ವಿಜಾಪುರ ಜಿಲ್ಲೆಯಿಂದ ಎಷ್ಟು ಆದಾಯ ಬರುತ್ತಿದೆ?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು)

ಅ. 2002-2003ನೇ ಸಾಲಿನಲ್ಲಿ 1.4.2002 ರಿಂದ 28.2.2003ರವರೆಗೆ ಸಾರಿಗೆ ಇಲಾಖೆಯಿಂದ ರಾಜ್ಯದ ಬೊಕ್ಕಸಕ್ಕೆ ರೂ. 589.00 ಕೋಟಿಗಳು ಸಂದಾಯವಾಗಿರುತ್ತದೆ.

ಆ.

| ವರ್ಷ | ಆದಾಯ (ರೂ.ಕೋಟಿಗಳಲ್ಲಿ) |
|---|---|
| 1999-2000 | ರೂ. 478.00 |
| 2000-2001 | ರೂ. 522.00 |
| 2001-2002 | ರೂ. 749.00 |

ಇ. 1999-2000 ನೇ ಸಾಲಿಗೆ ರೂ. 530 ಕೋಟಿಗಳ ಆದಾಯ ನಿರೀಕ್ಷಿಸಲಾಗಿದ್ದು, ಸದರಿ ವರ್ಷದಲ್ಲಿ ರೂ. 478 ಕೋಟಿ ರೂ.ಗಳ ಆದಾಯ ಮಾತ್ರ ಸಂದಾಯವಾಗಿರುತ್ತೆ. ಕಾರಣ, ರಸ್ತೆ ಸಾರಿಗೆ ಸಂಸ್ಥೆಗಳಿಂದ ನಿರೀಕ್ಷಿಸಿದ ರೂ. 52 ಕೋಟಿಗಳ ತೆರಿಗೆ ಸಂದಾಯವಾಗಲಿಲ್ಲವಾದ್ದರಿಂದ ನಿರೀಕ್ಷಿತ ಆದಾಯ ತಲುಪಿರುವುದಿಲ್ಲ.

2000-2001 ನೇ ಸಾಲಿಗೆ ರೂ. 597 ಕೋಟಿಗಳ ಆದಾಯ ನಿರೀಕ್ಷಿಸಲಾಗಿದ್ದು, ಸದರಿ ವರ್ಷದಲ್ಲಿ ರೂ.522 ಕೋಟಿಗಳ ಆದಾಯ ಮಾತ್ರ ಸಂದಾಯವಾಗಿರುತ್ತೆ. ಕಾರಣ ರಸ್ತೆ ಸಾರಿಗೆ ಸಂಸ್ಥೆಗಳಿಂದ ನಿರೀಕ್ಷಿಸಿದ ರೂ.53 ಕೋಟಿ ಸಂದಾಯವಾಗಲಿಲ್ಲವಾದ್ದರಿಂದ ಹಾಗೂ ಹೊಸ ವಾಹನ ನೋಂದಣಿಯಲ್ಲಿ ಕೊರತೆಯಿಂದಾಗಿ ನಿರೀಕ್ಷಿತ ಆದಾಯ ತಲುಪಿರುವುದಿಲ್ಲ.

2001-2002 ನೇ ಸಾಲಿಗೆ ರೂ.713 ಕೋಟಿಗಳ ಆದಾಯ ನಿರೀಕ್ಷಿಸಲಾಗಿದ್ದು, ಸದರಿ ಸಾಲಿನಲ್ಲಿ ನಿರೀಕ್ಷೆಗಿಂತ ಹೆಚ್ಚಾಗಿ ಅಂದರೆ ರೂ.749 ಕೋಟಿಗಳ ಆದಾಯಗಳಿಸಲಾಗಿದೆ.

ಈ. ಬಿಜಾಪುರ ಜಿಲ್ಲೆಯಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿ, ಬಿಜಾಪುರ ಹಾಗೂ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಝಿಲ್ಕಿ ತನಿಖಾ ಠಾಣೆಗಳಿಂದ ಸಂಗ್ರಹವಾದ ಆದಾಯ ಈ ಕೆಳಕಂಡಂತಿರುತ್ತದೆ.

| ವರ್ಷ | ಆದಾಯ (ರೂ.ಕೋಟಿಗಳಲ್ಲಿ) |
|---|---|
| 1999-2000 | ರೂ. 10.03 |
| 2000-2001 | ರೂ. 11.30 |
| 2001-2002 | ರೂ. 14.00 |
| 2002-2003 | ರೂ. 15.02 |

(ಫೆಬ್ರವರಿ 2003ರವರೆಗೆ)

## ರಾಜ್ಯದಲ್ಲಿರುವ ವಿವಿಧ ರೀತಿಯ ಲಾಟರಿಗಳು

1867 (2093) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಎಷ್ಟು ರೀತಿಯ ಲಾಟರಿಗಳಿಗೆ ಅನುಮತಿ ನೀಡಲಾಗಿದೆ?

2. ಇದರಿಂದ ರಾಜ್ಯದ ಬೊಕ್ಕಸಕ್ಕೆ ಬರುತ್ತಿರುವ ಆದಾಯ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

3. ಆನ್‌ಲೈನ್ ಲಾಟರಿಯನ್ನು ನಿಲ್ಲಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ? ಈ ಬಗ್ಗೆ ಸರ್ಕಾರದ ನಿಲುವೇನು?